# ಓಣಂ ದಿರಿಸು ನೋಟ ಸೊಗಸು!





ಓಣಂ ಎಂದ ತಕ್ಷಣ ನಮ್ಮ ಕಣ್ಣೆದುರು ಹಾದು ಹೋಗುವುದು ಕಸವು ಸೀರೆಯುಟ್ಟ (ಕ್ರೀಮ್ ಬಣ್ಣದ ದಿರಿಸಿಗೆ ಬಂಗಾರದಂಚಿನ ದಡಿ ಇರುವ ಸೀರೆ) ನಾರಿಯರ ಗುಂಪು. ಸೀರೆ, ಮುಂಡು, ಲಂಗ–ಬ್ಲೌಸು... ಹೀಗೆ ಓಣಂ ಹಬ್ಬ ಕಳೆ ಕಟ್ಟುವುದೇ ಈ ಸಾಂಪ್ರದಾಯಿಕ ಉಡುಗೆಯಿಂದ. ಈ ದಿರಿಸು ಈಗ ಫ್ಯಾಷನಬಲ್ ಉಡುಪಾಗಿ ಸೆಳೆಯುತ್ತಿದೆ.

■ ಕೃಷ್ಣಿ ಶಿರೂರ

ಕ್ರೀಮ್ ಬಣ್ಣದ ಸೀರೆಗೆ ಹೊಂಬಣ್ಣದ ಜರಿಯಂಚು ತೊಟ್ಟ ಮಹಿಳೆಯರು, ಇದೇ ಬಣ್ಣದ ಬಟ್ಟೆಗೆ ಜರಿಯಂಚಿನ ಮುಂಡು ತೊಟ್ಟ ಪುರುಷರು ಕಾಣಿಸಿಕೊಳ್ಳುವುದು ಕೇರಳದ ಸಾಂಪ್ರದಾಯಿಕ ಹಬ್ಬ ಓಣಂ ಸಂದರ್ಭದಲ್ಲಿ. ಇದು ಸುಗ್ಗಿಯ ಹಬ್ಬ. ಸಂಭ್ರಮದ ಪರ್ವವೂ ಹೌದು. ಒಂದೇ ರೀತಿಯ ದಿರಿಸು, ಮನೆಯಂಗಳದಲ್ಲಿ ವರ್ಣರಂಜಿತ ಪೂಕಳಂ (ಹೂವಿನ ರಂಗೋಲಿ), ಅಡುಗೆ ಮನೆಯಲ್ಲಿ ವಿಶೇಷ ಖಾದ್ಯಗಳ (ಸದ್ಯ) ಘಮಲು ಓಣಂ ಹಬ್ಬದ ಸಂಭ್ರಮವನ್ನು ಸಾರುತ್ತದೆ.

ಓಣಂ ಎಂದರೆ ಫ್ಯಾಷನ್‌ಪ್ರಿಯರಿಗೆ ಸಡಗರದ ಹಬ್ಬ. ಈಗೆಲ್ಲ ಹಬ್ಬ ಬಂತೆಂದರೆ ಬಟ್ಟೆ ಅಂಗಡಿಗಳಿಗೆ ಹೋಗಿ ಖರೀದಿಸುವಷ್ಟು ಪುರುಸೊತ್ತು ಯಾರಿಗೂ ಉಳಿದಿಲ್ಲ. ಅದಕ್ಕೆ ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ಖರೀದಿಸುವವರೇ ಹೆಚ್ಚು. ಹೀಗಿರುವಾಗ ವಸ್ತ್ರ ವಿನ್ಯಾಸಕರು ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ವಸ್ತ್ರವಿನ್ಯಾಸಕರ ಪೈಪೋಟಿಗೆ ಸಿಕ್ಕ ಓಣಂ ಸಾಂಪ್ರದಾಯಿಕ ದಿರಿಸು ವೈವಿಧ್ಯಮಯ ವಿನ್ಯಾಸದೊಂದಿಗೆ ಆನ್‌ಲೈನ್ ಮಾರುಕಟ್ಟೆಯಲ್ಲಿ ಬಹುಬೇಡಿಕೆ ಪಡೆಯುತ್ತಿದೆ.

ಯುವಜನರ ಮೈಮನಕ್ಕೊಪ್ಪುವ ಕ್ರೀಮ್

